# KANNADA – 015

## Sample Question Paper for Class 10 Examination 2016-17

## BLUE PRINT

### (ನೀಲಿ ನಕಾಶೆ)

10ನೇ ತರಗತಿ ಕನ್ನಡ(ದ್ವಿತೀಯ ಭಾಷೆ) ಸಿರಿಗನ್ನಡ – 10 ಅಂಕಗಳು : 90

| ಕ್ರ. ಸಂ. | ಗದ್ಯಪಾಠಗಳು | 1 ಅಂಕದ ಪ್ರಶ್ನೆ | 2 ಅಂಕದ ಪ್ರಶ್ನೆ | 3 ಅಂಕದ ಪ್ರಶ್ನೆ | 5 ಅಂಕದ ಪ್ರಶ್ನೆ | ಒಟ್ಟು ಅಂಕಗಳು |
|---|---|---|---|---|---|---|
| | **ಪಾಠಗಳು** | | | | | |
| 1 | ಸರ್ ಎಂ. ವಿಶ್ವೇಶ್ವರಯ್ಯ | 1+1 | – | 1 ಸಂದರ್ಭ<br>1 ಪ್ರಶ್ನೆ | – | 8 |
| 2 | ಎದೆಗೆ ಬಿದ್ದ ಅಕ್ಷರ | 1+1 | – | | 1 | 7 |
| 3 | ವೃಕ್ಷ ಸಾಕ್ಷಿ | 1+1 | – | – | 1 | 7 |
| 4 | ವ್ಯಾಘ್ರ ಗೀತೆ | 1 | – | 1 ಸಂದರ್ಭ<br>1 ಪ್ರಶ್ನೆ | – | 7 |
| | **ಪದ್ಯಗಳು** | | | | | |
| 5 | ಸಂಕಲ್ಪ ಗೀತೆ | 1+1 | – | – | 1 | 7 |
| 6 | ಕೌರವೇಂದ್ರನ ಕೊಂದೆ ನೀನು | 1+1 | – | – | 1 | 7 |
| 7 | ವೀರ ಲವ | 1+1 | – | 1 ಸಂದರ್ಭ<br>1 ಪ್ರಶ್ನೆ | – | 8 |
| 8 | ಸಂಕಟಕೆ ಗಡಿ ಇಲ್ಲ | 1 | – | 1 ಸಂದರ್ಭ<br>1 ಪ್ರಶ್ನೆ | – | 7 |
| | **ಪೋಷಕ ಪಠ್ಯ** | | | | | |
| 9 | ಪಾರಿವಾಳ | – | 1+1 | – | – | 4 |
| 10 | ಜನಪದ ಒಗಟುಗಳು | – | 1+1 | – | – | 4 |
| | | 14 | 8 | 16 | 10 | 50 |
| | **ವ್ಯಾಕರಣ** | | | | | |
| | ಗದ್ಯ ಮತ್ತು ಪದ್ಯಭಾಗ | 6+6 | – | – | – | 12 |
| | ಪ್ರಬಂಧ ಲೇಖನ | 6 | – | – | – | 6 |
| | ಪತ್ರ ಲೇಖನ | 4 | – | – | – | 4 |
| | ವರದಿ | 4 | – | – | – | 4 |
| | ವ್ಯಾಕರಣ | 14 | – | – | – | 14 |
| | **ಒಟ್ಟು ಅಂಕಗಳು** | | | | | **90** |

# KANNADA – 015
## Sample Question Paper for Class 10 Examination 2016-17

ತರಗತಿ : 10 ಕನ್ನಡ(ದ್ವಿತೀಯ ಭಾಷೆ) ಸಿರಿಗನ್ನಡ – 10 ಅಂಕಗಳು : 90

ಸಮಯ : 3 ಗಂಟೆಗಳು

**ಸೂಚನೆಗಳು :**

ಈ ಪ್ರಶ್ನೆಪತ್ರಿಕೆಯು ಎ,ಬಿ,ಸಿ ಮತ್ತು ಡಿ ಎಂಬ ನಾಲ್ಕು ಭಾಗಗಳನ್ನೊಳಗೊಂಡಿರುತ್ತದೆ .

| | |
|---|---|
| ವಿಭಾಗ – ಎ ( ವಾಚನ ಮತ್ತು ಗ್ರಹಿಕಾ ಕೌಶಲ್ಯ) | 12 ಅಂಕಗಳು |
| ವಿಭಾಗ – ಬಿ ( ಬರವಣಿಗೆ ಕೌಶಲ ) | 14 ಅಂಕಗಳು |
| ವಿಭಾಗ – ಸಿ ( ಅನ್ವಯಿಕ ವ್ಯಾಕರಣ ) | 14 ಅಂಕಗಳು |
| ವಿಭಾಗ – ಡಿ ( ಪಠ್ಯಗಳ ಅಧ್ಯಯನ ) | 50 ಅಂಕಗಳು |

---

**ವಿಭಾಗ – ಎ ( ವಾಚನ ಮತ್ತು ಗ್ರಹಿಕಾ ಕೌಶಲ ) ( 12 ಅಂಕಗಳು )**

1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

ಕರ್ನಾಟಕದ ಗೊಂಬೆಯಾಟಗಳಲ್ಲಿ ಎರಡು ಬಗೆ. ಒಂದು ಸೂತ್ರದ ಗೊಂಬೆಯಾಟ, ಇನ್ನೊಂದು ತೊಗಲು ಗೊಂಬೆಯಾಟ. ಎರಡನ್ನೂ ಸೂತ್ರಗಳಿಂದಲೇ ಹಿಡಿದು ಆಡಿಸುತ್ತಾರೆ. ಈ ಎರಡೂ ಬಗೆಯ ಗೊಂಬೆಗಳನ್ನು ಯಕ್ಷಗಾನ ಬಯಲಾಡದಂತೆ ಆಡಿಸಲಾಗುವುದು ಸೂತ್ರದ ಗೊಂಬೆಯಾಟದಲ್ಲಿ ಮರದಿಂದ ಮಾಡಿದ ಗೊಂಬೆಗಳನ್ನೂ, ತೊಗಲುಗೊಂಬೆಯಾಟದಲ್ಲಿ ಚರ್ಮದಿಂದ ಮಾಡಿದ ಗೊಂಬೆಗಳನ್ನೂ ಬಳಸುತ್ತಾರೆ. ಈ ಗೊಂಬೆಗಳನ್ನು ಸೂತ್ರಗಳಿಂದ ಕುಣಿಸುವವರು ಮನುಷ್ಯರೇ. ಪರದೆಯ ಹಿಂದೆ ನಿಂತ ಅವರು ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ. ಗೊಂಬೆಗಳು ಮಾತ್ರ ರಂಗದ ಮೇಲೆ ಕಾಣುತ್ತವೆ.

ನಮ್ಮ ಅನೇಕ ಪ್ರಾಚೀನ ಕಾವ್ಯಗಳಲ್ಲಿ ಸೂತ್ರಧಾರ ಎಂಬ ಮಾತು ಬರುತ್ತದೆ. ಸೂತ್ರಧಾರ ಎಂದರೆ ಸೂತ್ರವನ್ನು ಹಿಡಿದು ಆಡಿಸುವವನು ಎಂದು ಅರ್ಥ. ದೇವರನ್ನು ಹಾಗೆಂದು ಕರೆಯುವುದೂ ಉಂಟು. "ದೇವರು ಆಡಿಸಿದಂತೆ ನಾವು ಆಡುತ್ತೇವೆ, ಎಲ್ಲಾ ಭಗವಂತನ ಲೀಲೆ, ಅವನು ಸೂತ್ರಧಾರ" ಎಂದು ಮುಂತಾಗಿ ಹೇಳುತ್ತೇವೆ. ಸೂತ್ರಧಾರ ಬುದ್ಧಿವಂತನಲ್ಲದಿದ್ದರೆ ಆಟ ಕೆಟ್ಟು ಹೋಗುತ್ತದೆ. ಅವನೇ ಅಲ್ಲಿಯ ಮುಖ್ಯಸ್ಥ. ಗೊಂಬೆಗಳಿಗೆ ದಾರವನ್ನೋ ಅಥವಾ ಮತ್ತೇನೋ ಅಂತಹುದನ್ನೇ ಕಟ್ಟಿ ಅದರ ಸಹಾಯದಿಂದ ಗೊಂಬೆಗಳಂತಹ ನಿರ್ಜೀವ ವಸ್ತುಗಳಿಗೆ ಜೀವಕಳೆಯನ್ನು ತುಂಬಿ ತನ್ನ ಕೈಚಳಕದಿಂದ ಕುಣಿಸುವುದರಿಂದ, ಈ ಆಟವನ್ನು "ಸೂತ್ರದ ಗೊಂಬೆಯಾಟ" ಎನ್ನುತ್ತಾರೆ.

ಪ್ರಶ್ನೆಗಳು :

1) ಕರ್ನಾಟಕದಲ್ಲಿ ಇರುವ ಗೊಂಬೆಯಾಟಗಳು ಎಷ್ಟು? ಅವು ಯಾವುವು? 1
2) ಗೊಂಬೆಗಳನ್ನು ಯಾವುದರಿಂದ ತಯಾರಿಸಿರುತ್ತಾರೆ? ಅವುಗಳನ್ನು ಹೇಗೆ ಆಡಿಸುತ್ತಾರೆ? 2
3) ದೇವರ ಬಗೆಗೆ ಏನೆಂದು ಉಲ್ಲೇಖಿಸಲಾಗಿದೆ ? 1
4) "ಸೂತ್ರದ ಗೊಂಬೆಯಾಟ" ಎನ್ನುವ ಹೆಸರು ಬರಲು ಕಾರಣವೇನು ? 2

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ;

ಅಂದು.. ಎರಡು ಸಾವಿರದ್ಯೆನೂರು ವರುಷಗಳ ಪೂರ್ವ
ಬುದ್ಧನೆಂಬವನಿದ್ದ ಮಹಾಪುರುಷನೋರ್ವ
ಸಿದ್ಧಾರ್ಥನೆಂಬುದವನ ನಿಜ ನಾಮ
ಬೌದ್ಧ ಧರ್ಮಕೆ ಆದನವ ಉಸಿರು ।

ಒಮ್ಮೆ.. ಸತ್ತವನ ಹೆಣಕಂಡು ಮರುಗಿದನವ ಸಿದ್ಧಾರ್ಥ
ಮುಪ್ಪು ಮರಣಗಳುಂಟೆ ? ಏನವಕೆ ಅರ್ಥ ?
ಅದನು ತಿಳಿಯಲಿಕೆಂದೆ ಹೊರಟು ಬಿಟ್ಟ
ಮಗ–ಮಡದಿ ರಾಜ್ಯಕೋಶವ ಬಿಟ್ಟ !

ಅಡವಿಯಲಿ ಅಲೆದಾಡಿ ಬಳಲಿದನು ಬೆಂಡಾಗಿ
ಕೊನೆಗೊಮ್ಮೆ ಬೆಳಕು ಕಂಡನವ ಬೋಧಿ ವೃಕ್ಷದ ತಳದಿ
ಆಶೆಯೆಂಬುದೆ ಘನ ಘೋರ ; ತ್ಯಾಗಕಿಲ್ಲ ಸರಿಸಾಟಿ
ದಯೆಯು ಧರ್ಮದ ಮೂಲ ಬದುಕಿಗದು ಮೇಟಿ !

ಸಾಧನೆಯ ಮಾರ್ಗದಲಿ ಸಾಗಿ ಸಾಗಲು ಬುದ್ಧ
ಪ್ರೀತಿಯೆಂಬುದ ತೋರಿ, ತ್ಯಾಗದಿಂ ಜಗ ಗೆದ್ದ
ಮಾಯೆ ಮೋಹಗಳಲ್ಲಿ ನಾವಿರಲು ಬದ್ಧ
ಆಗಬಹುದೇ ಹೇಳಿ ! ಮನುಕುಲವು ಬುದ್ಧ !

– ಮಹಾಲಿಂಗ ಯಾಳಗಿ

ಪ್ರಶ್ನೆಗಳು :

1) ಬುದ್ಧನ ಮೂಲ ಹೆಸರೇನು ? 1
2) ಬುದ್ಧ ಏನನ್ನು ತಿಳಿಯಲು ಹೊರಟನು ? 2
3) ಬುದ್ಧನು ಬೆಳಕು ಕಂಡ ಬಗೆ ಹೇಗೆ ? 1
4) ಬುದ್ಧ ಜಗವನ್ನು ಹೇಗೆ ಗೆದ್ದನು ? 2

**ವಿಭಾಗ – ಬಿ ( ಬರವಣಿಗೆ ಕೌಶಲ )**

3. ಕೆಳಗಿನ ಯಾವುದಾದರೊಂದು ವಿಷಯವನ್ನು ಕುರಿತು 150 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 6
   1) ವರದಕ್ಷಿಣೆಯ ಪಿಡುಗು
   2) ಗೆಳೆಯನಾಗಿ ಪುಸ್ತಕಗಳ ಪಾತ್ರ

4. ನಿಮ್ಮ ಗ್ರಾಮಕ್ಕೆ ಹೆಚ್ಚುವರಿ ಬಸ್ ಸೌಲಭ್ಯವನ್ನು ಒದಗಿಸುವಂತೆ ಕೋರಿ ನಿಮ್ಮ ಜಿಲ್ಲಾ ಸಾರಿಗೆ ನಿಗಮದ ಆಯುಕ್ತರಿಗೆ ಪತ್ರವನ್ನು ಬರೆಯಿರಿ.

ಅಥವಾ

ಜವಹರ ನವೋದಯ ಶಾಲೆಗಳಲ್ಲಿ ಖಾಲಿ ಇರುವ ಕನ್ನಡ ಉಪಾಧ್ಯಾಯಕ ಹುದ್ದೆಗೆ ದಿನಾಂಕ 25.02.2016ರ ಪ್ರಜಾವಾಣಿ ದಿನಪತ್ರಿಕೆಯ ಜಾಹೀರಾತಿನ ಮೇರೆಗೆ ಅರ್ಜಿಯನ್ನು ಸಲ್ಲಿಸಿ. 4

5. ನಿಮ್ಮ ಜಿಲ್ಲೆಯಲ್ಲಿ ಉಂಟಾದ ಬರಗಾಲದ ಪರಿಸ್ಥಿತಿಯನ್ನು ವಿವರಿಸಿ, ಹಾಗೂ ಪರಿಹಾರವನ್ನು ಸೂಚಿಸಿ ವರದಿಯನ್ನು ಬರೆಯಿರಿ. 4

## ವಿಭಾಗ – ಸಿ ( ಅನ್ವಯಿಕ ವ್ಯಾಕರಣ )

6. ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ:

1. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : 1

   ಅ) ಉರ್ವಿ ಆ) ವಾಜಿ

2. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ. 2

   ಅ) ಲೇಖನವನೋದಿ ಆ) ಶವವಾದವು

3. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ. 2

   ಅ) ಪೂದೋಟ ಆ) ಮುರಾರಿ

4. ಈ ವಾಕ್ಯವನ್ನು ಕರ್ತರಿ ವಾಕ್ಯವನ್ನಾಗಿ ಪರಿವರ್ತಿಸಿ : 1

   "ಕುವೆಂಪುರವರ 'ರಾಮಾಯಣ ದರ್ಶನಂ' ಮಹಾಕಾವ್ಯವು ಪ್ರತಿಯೊಬ್ಬ ಓದುಗನಿಂದ ಹೊಗಳಲ್ಪಟ್ಟಿದೆ."

5. ಈ ಕೆಳಗಿನ ವಾಕ್ಯವನ್ನು ಸಂಭವನಾರ್ಥಕ ರೂಪಕ್ಕೆ ಪರಿವರ್ತಿಸಿರಿ ; 1

   "ನಾಳೆ 'ಕರ್ನಾಟಕ ಬಂದ್' ಚಳವಳಿಯ ಕಾರಣದಿಂದ ಅಂಗಡಿ ಮುಂಗಟ್ಟುಗಳು ಮುಚ್ಚಿರುತ್ತವೆ."

6. ಕೆಳಗಿನ ಪದಗಳಿಗೆ ತತ್ಸಮ – ತದ್ಭವ ರೂಪವನ್ನು ಬರೆಯಿರಿ. 1

   ಅ) ಋಷಿ ಆ) ಯೋಧ

7. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ. 1

   ಅ) ಪಾಂಡು : ಕುಂತಿ :: ಧೃತರಾಷ್ಟ್ರ : ______

   ಆ) ಕರ್ಣ : ಇನನಂದನ :: ಭೀಮ : ______

8. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ. 1

   ಅ) ಸಾಧಾರಣ ಆ) ಏರಿಕೆ

9. ಈ ಪದಗಳಿಗೆ ಜೋಡುನುಡಿಯನ್ನು ಬರೆಯಿರಿ:

   ಅ) ಆಚಾರ ಆ) ದವಸ

10. ಕೆಳಗಿನ ಪದಗಳಲ್ಲಿರುವ ವಿಭಕ್ತಿಯನ್ನು ಹೆಸರಿಸಿ : 1

    ಅ) ಧರ್ಮದಿಂ ಆ) ಪುರದೊಳ್

11. ಕೆಳಗಿನ ಗಾದೆ ಮಾತನ್ನು ವಿವರಿಸಿ. 2

    'ಗಾಳಿ ಬಂದಾಗ ತೂರಿಕೋ'

## ವಿಭಾಗ – ಡಿ (ಪಠ್ಯಗಳ ಅಧ್ಯಯನ)

7. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. 14

1) ಸರ್ ಎಂ. ವಿಶ್ವೇಶ್ವರಯ್ಯ ಅವರ ಮನೆತನಕ್ಕೆ ಅವರ ಮೂಲ ಸ್ಥಳದ ಈ ಹೆಸರು ಸೇರಿಕೊಂಡಿತ್ತು–

   (1) ಮುದ್ದೇನಹಳ್ಳಿ (2) ಮೋಕ್ಷಗುಂಡಂ
   (3) ಕೋಲಾರ (4) ದಿವಾನ

2) ವಿಶ್ವೇಶ್ವರಯ್ಯನವರು ಈ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು –

(1) ಹೈದರಾಬಾದ್ (2) ಸಿಕಂದರಾಬಾದ್
(3) ಮೈಸೂರು (4) ಮುಂಬೈ

3) ಇದು ಷೇಕ್ಸ್‌ಪಿಯರ್ ಅವರ ಪ್ರಸಿದ್ಧ ದುರಂತ ನಾಟಕಗಳಲ್ಲಿ ಒಂದು –

(1) ವಾರ್ ಅಂಡ್ ಪೀಸ್ (2) ಹ್ಯಾಮ್ಲೆಟ್
(3) ದಿ ಮೋಸ್ಟ್ ವಾಂಟೆಡ್ ಮ್ಯಾನ್ (4) ಸೀಕ್ರೆಟ್ ಟನಲ್

4) ಕ್ರಿ.ಶ. ಹನ್ನೆರಡನೆಯ ಶತಮಾನದಲ್ಲಿ ಕ್ರಾಂತಿಯನ್ನು ಉಂಟುಮಾಡಿದ ಸಾಹಿತ್ಯವಿದು –

(1) ದಾಸ ಸಾಹಿತ್ಯ (2) ಹಳಗನ್ನಡ ಸಾಹಿತ್ಯ
(3) ಬಂಡಾಯ ಸಾಹಿತ್ಯ (4) ವಚನ ಸಾಹಿತ್ಯ

5) ಧರ್ಮಬುದ್ಧಿಯು ವಾಸವಿದ್ದುದು ಈ ನಗರದಲ್ಲಿ –

(1) ದೇವನಗರಿ (2) ಮಥುರಾ
(3) ಕಾಶೀ (4) ಧರ್ಮಪುರಿ

6) ಸಂಸ್ಕೃತ ಭಾಷೆಯಲ್ಲಿ 'ಪಂಚತಂತ್ರ' ಕೃತಿಯನ್ನು ರಚಿಸಿರುವವರು –

(1) ದುರ್ಗಸಿಂಹ (2) ರಾಘವಾಂಕ
(3) ನಯಸೇನ (4) ವಸುಭಾಗಭಟ್ಟ

7) 'ಸ್ವಧರ್ಮೇ ನಿಧನಂ ಶ್ರೇಯಃ' ಎಂದು ಈ ಗ್ರಂಥದಲ್ಲಿ ಹೇಳಿದೆ –

(1) ಮಹಾಭಾರತದಲ್ಲಿ (2) ಭಗವದ್ಗೀತೆಯಲ್ಲಿ
(3) ಋಗ್ವೇದದಲ್ಲಿ (4) ರಾಮಾಯಣದಲ್ಲಿ

8) ಕಲುಷಿತವಾಗಿರುವ ನದೀ ಜಲಗಳಿಗೆ ನಾವು ಈ ಮಳೆಯಾಗಬೇಕೆಂದು ಕವಿ ಹೇಳಿದ್ದಾರೆ –

(1) ಜಡಿಮಳೆ (2) ಕಾರ್ಮೋಡದ
(3) ಹಿಂಗಾರಿನ (4) ಮುಂಗಾರಿನ

9) ಕೃಷ್ಣನ ಮಾತನ್ನು ಕೇಳಿ ಕರ್ಣನ ಕೊರಳ ಸೆರೆ ಹಿಗ್ಗಿ -------- ಉರವಣಿಸಿತು.

(1) ಭಕ್ತಿ (2) ದೃಗುಜಲ
(3) ಸಂತಸ (4) ಪ್ರೀತಿ

10) ಪಂಡಿತರಿಗೆ ಮಾತ್ರವಲ್ಲದೆ ಪಾಮರರಿಗೂ ಕಾಮಧೇನು ಎಂಬ ಗೌರವಕ್ಕೆ ಇವರು ಪಾತ್ರರಾಗಿದ್ದಾರೆ –

(1) ಕುವೆಂಪು (2) ಬೇಂದ್ರೆ
(3) ಕುಮಾರವ್ಯಾಸ (4) ಪೊನ್ನ

11) ವಾಲ್ಮೀಕಿ ಒಬ್ಬ –

(1) ದೇವರ್ಷಿ (2) ಬ್ರಹ್ಮರ್ಷಿ
(3) ಮಹರ್ಷಿ (4) ರಾಜರ್ಷಿ

12) ಜಲಾಧಿಪತಿಯೆಂದು ಪ್ರಖ್ಯಾತಿ ಹೊಂದಿರುವವರು ಇವರು –

(1) ಆದಿತ್ಯ (2) ವರುಣ
(3) ಸುನಾಮಿ (4) ಸಮುದ್ರರಾಜ

13) 'ಸಂಕಲ್ಪಗೀತೆ' ಕವಿತೆಯ ಆಕರ ಇದು –
   (1) ಎದೆ ತುಂಬಿ ಹಾಡಿದೆನು    (2) ಹಣೆದರೆ ಜೇಡನಂತೆ
   (3) ದೂರ ಸರಿದವರು    (4) ಜೈ ಜವಾನ್

14) ಪ್ರಪಂಚದಲ್ಲಿ ಎಲ್ಲ ಸ್ತರದ ಜೀವಿಗಳಿಗೂ ಬದುಕುವ ಹಕ್ಕಿದೆ ಎಂಬುದನ್ನು ಕವಿತೆಯ ಮೂಲಕ ತಿಳಿಸುವ ಪ್ರಯತ್ನ ಮಾಡಿರುವವರು –
   (1) ದ.ರಾ. ಬೇಂದ್ರೆ    (2) ಜಿ.ಎಸ್. ಶಿವರುದ್ರಪ್ಪ
   (3) ದು. ಸರಸ್ವತಿ    (4) ಚನ್ನವೀರ ಕಣವಿ

8. ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ: 8
   1) ಪಾರಿವಾಳಗಳ ಸಂಸಾರ 'ಸುಖೀ ಸಂಸಾರ' ಹೇಗೆ? ವಿವರಿಸಿ.
   2) 'ದುಡುಕು ಹಾಗೂ ಆತುರ ಅನರ್ಥಕ್ಕೆ ಕಾರಣ' – ಈ ಮಾತು ಪಾರಿವಾಳಗಳಿಗೆ ಹೇಗೆ ಅನ್ವಯಿಸುತ್ತದೆ?
   3) ಎರಡನೆಯ ಒಗಟಿಗೆ 'ಕುಪ್ಪಸ' ಎಂಬುದು ಹೇಗೆ ಉತ್ತರವಾಗುತ್ತದೆ?
   4) ಎಂಟನೆಯ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ಸಮರ್ಥಿಸಿ.

9. ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ: 18
   1) ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯನವರು ಸಲ್ಲಿಸಿದ ಸೇವೆಯನ್ನು ವಿವರಿಸಿ.
   2) ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರುವುದಕ್ಕೆ ಲೇಖಕರು ಕೊಡುವ ಕಾರಣಗಳಾವುವು?
   3) ಸಂದರ್ಭದೊಂದಿಗೆ ವಿವರಿಸಿ:
      "ಈಗ ಹುಲಿ ಎಷ್ಟು ಹಸಿದಿರಬೇಕು."
      ಅಥವಾ
      "ತಾವು ಕಡಿಮೆ ಮಾತನಾಡಿದ್ದೀರಿ; ಹಾಗೂ ಹೆಚ್ಚು ಕೆಲಸ ಮಾಡಿದ್ದೀರಿ."
   4) ಮಾನವನ ಕಾದಾಟಕ್ಕೆ ಕಾರಣವೇನು?
   5) ಮುನಿಸುತರು ಅಂಜಲು ಕಾರಣವೇನು? ಅದಕ್ಕೆ ಲವನು ಯಾವ ರೀತಿ ಪ್ರತಿಕ್ರಿಯಿಸಿದನು?
   6) ಸಂದರ್ಭದೊಂದಿಗೆ ವಿವರಿಸಿ:
      "ಎರಡೂ ಕಡೆ ಹರಿದ ನೇತ್ರರೊಂದೆ."
      ಅಥವಾ
      "ರಘೂದ್ವಹನ ಸೊಲ್ಗೇಳಿ ನಮಿಸಲಿಳೆಯೊಳ್."

10. ಕೆಳಗಿನ ಪ್ರಶ್ನೆಗಳಿಗೆ 8–10 ವಾಕ್ಯಗಳಲ್ಲಿ ಉತ್ತರಿಸಿ: 10
   1) ಸತ್ಯ–ಸಮಾನತೆಯ ಬಗೆಗೆ ನಿಮ್ಮ ಅನಿಸಿಕೆಗಳೇನು?
      ಅಥವಾ
      "ಸತ್ಯಕ್ಕೇ ಎಂದಿಗೂ ಜಯ" ಎಂಬ ಮಾತು ಧರ್ಮಬುದ್ಧಿಯ ವಿಷಯದಲ್ಲಿ ಹೇಗೆ ನಿಜವಾಯಿತು?
   2) ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?
      ಅಥವಾ
      ಕೃಷ್ಣನು ಕರ್ಣನ ಮನಸ್ಸನ್ನು ಬದಲಿಸಲು ಯಾವ ತಂತ್ರವನ್ನು ಹೂಡಿದನು? ಅದಕ್ಕೆ ದೊರೆತ ಪ್ರತಿಫಲವೇನು? ವಿವರಿಸಿ.

* * *